ಶ್ರೀ ಕೆ. ಎ. ಶಂಕರಗೌಡರು (ಮಂಡ್ಯ).—ನಿವೇ ಶನವೇ ಇಲ್ಲದೆ ಸುಮ್ಮನೆ ಸಾಮಾನುಗಳನ್ನು ತೆಗೆದು ಕೊಂಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದು ಕೊಳ್ಳಲಾಗುತ್ತದೆಯೆ ?

ಶ್ರೀ ಕೆ. ಹನುಮಂತಯ್ಯನವರು.—ರುಜುವಾತಾದರೆ ತೆಗೆದುಕೊಳ್ಳುತ್ತೇವೆ.

Retrenchments and resulting hardships.

Q.—215. **Sri B. P. NAGARAJA MURTHY** (Malavalli).—

Will the Government be pleased to state :—

(*a*) the principle laid down for retrenching the Government servants :

(*b*) the total number of menials that would be affected by the policy of retrenchment ;

(*c*) the number of officials whose salary is above Rs. 100 that would be affected by the said policy ;

(*d*) the amount to be saved by retrenchment ?

A.—**Sri K. HANUMANTHAIYA** (Chief Minister).—

(*a*) The principle is to avoid superfluous or unnecessary expenditure.

(*b*) A standard scale had been fixed as regards the number of menials for each office. The Heads of Departments have been requested to furnish information regarding number retrenched according to the modified scale. Apart from the standard scale, menials have been retrenched where the work did not require their services.

(*c*) and (*d*) Information has already been furnished to the House in the Budget Speech.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಖರ್ಚು ಕೋತಾಮಾಡುವ ಕಾರ್ಯಕ್ರಮದಿಂದ ಅಧಿಕಾರಿಗಳಿಗಿಂತ ಹೆಚ್ಚಾಗಿ ಕೆಳದರ್ಜೆ ನೌಕರರಿಗೂ ಜನಾವರಿಗೂ ಹೆಚ್ಚು ಅನಾನುಕೂಲವಾಗುತ್ತಿದೆ ಯೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಹನುಮಂತಯ್ಯನವರು.—ಮುಖ್ಯವಾಗಿ, ಇದನ್ನು ಮಾಡುವಾಗ ಕಾರುಣ್ಯದೃಷ್ಟಿಯಿಂದ ಮಾಡುವುದಕ್ಕಾಗುವುದಿಲ್ಲ. ಎಲ್ಲಿ ಅನಾವಶ್ಯಕವಾಗಿ ನೌಕರರಿರುತ್ತಾರೋ ಅವರನ್ನೆಲ್ಲಾ ತೆಗೆದು ಹಾಕಬೇಕಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಇದರಿಂದ ಹೆಚ್ಚು ಜನರು ನಿರುದ್ಯೋಗಿಗಳಾದರೆ, ಅವರಿಗೆ ಪರಿಹಾರವೇನಾದರೂ ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆಯೆ ?

ಶ್ರೀ ಕೆ. ಹನುಮಂತಯ್ಯನವರು.—ಹಾಗೆ ಪರಿಹಾರ ಕೊಡುವ ನೀತಿಯನ್ನು ಅಂಗೀಕಾರ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಹೆಚ್ಚು ಉಳಿತಾಯವಾಗುವಂತೆ ಸ್ವಲ್ಪ ಅಧಿಕಾರಿಗಳನ್ನು ಕೋತಾಮಾಡುವುದು ಒಳ್ಳೆಯದಲ್ಲವೆ ?

ಶ್ರೀ ಕೆ. ಹನುಮಂತಯ್ಯನವರು.—ನ್ಪಷ್ಟವಾಗಿ ನಾನು ಹೇಳಬೇಕಾದರೆ, ಸರ್ಕಾರವೇ ಎಲ್ಲರಿಗೂ ಉದ್ಯೋಗವನ್ನು ಕಲ್ಪಿಸಿಕೊಡಬೇಕೆಂಬ ನೀತಿಯನ್ನು ಸರ್ಕಾರ ಒಪ್ಪುವುದಿಲ್ಲ.

Disposal of applications for help for construction of houses in Gundlupet Taluk.

Q.—478. **Sri SIDDIAH** *alias* **KUNNIAH** (Gundlupet-Heggaddevankote—Scheduled Castes).—

Will the Government be pleased to state :—

(*a*) the amount allotted for constructing dwelling houses in Gundlupet Taluk for the last three years ;

(*b*) the number of applications received from this taluk requesting for help for the construction of houses ;

(*c*) the number of houses constructed in each village ;

(*d*) the number of such applications pending disposal and reasons for not disposing them of as yet ?

A.—**Sri K. HANUMANTHAIYA** (Chief Minister).—

	1949-50	1950-51	1951-52
(*a*)	Rs.	Rs.	Rs.
	9,500	15,500	21,000
(*b*)	56	72	172

(*c*) 300 houses in 52 villages. Detailed information is being collected.

(*d*) Nil. Nil.
32 pending for want of funds.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲು ಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, (ಬ) ಪ್ರಶ್ನೆಗೆ ಉತ್ತರವಾಗಿ 49-50ರಲ್ಲಿ 56 50-51ರಲ್ಲಿ 72 ಮತ್ತು 51-52ರಲ್ಲಿ 172 ಅರ್ಜಿಗಳು ಬಂದಿವೆ ಯೆಂದು ತಿಳಿಸಲಾಗಿದೆ. ಒಬ್ಬೊಬ್ಬರಿಗೆ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿಕೊಳ್ಳಲು ಸಹಾಯವನ್ನು ಸರ್ಕಾರದವರು ನೀಡುತ್ತಾರೆ ?

ಶ್ರೀ ಕೆ. ಹನುಮಂತಯ್ಯನವರು.—ಒಬ್ಬೊಬ್ಬರಿಗೆ ಒಂದೊಂದು ಮನೆಯನ್ನು ಕಟ್ಟಿಕೊಳ್ಳಲು ಸಹಾಯ ನೀಡಬೇಕೆಂಬುದು ಸರ್ಕಾರದ ನೀತಿಯಾಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—56 ಅರ್ಜಿದಾರರಿಗೆ 300 ಮನೆಗಳನ್ನು ಕಟ್ಟಿಸಿಕೊಡಲಾಯಿ